ಕೃಷಿ ವಿಶ್ವ ವಿದ್ಯಾನಿಲಯ
ಕೃಷಿ ಹವಾಮಾನ ವಿಭಾಗ
ಜಿ.ಕೆ.ವಿ.ಕೆ., ಬೆಂಗಳೂರು–560065
* ಗ್ರಾಮೀಣ ಕೃಷಿ ಹವಾಮಾನ ಸೇವಾ ವರದಿ ಪತ್ರಿಕೆ *

ದಿನಾಂಕ: 02-12-2016

ಬೆಂಗಳೂರು ನಗರ ಜಿಲ್ಲೆಗೆ ಸೀಮಿತವಾಗಿದೆ

ಈ ವಾರದ ಮುನ್ಸೂಚನೆ (ದಿನಾಂಕ 03.12.16 –07.12.16 ವರೆಗೆ)

	03.12.2016	04.12.2016	05.12.2016	06.12.2016	07.12.2016
ಮಳೆ (ಮಿ ಮಿ)	4	6	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	27	27	27	28	28
ಕನಿಷ್ಠ ಉಷ್ಣಾಂಶ (ಡಿ.ಸೆ.)	18	18	17	16	15
ವೋಡ (ಪ್ರಮಾಣ)	7	4	6	8	7
ಆರ್ದ್ರತೆ ೭.೨೦ ಬೆ (ಶೇ)	97	97	96	92	70
ಆರ್ದ್ರತೆ ೨.೨೦ ಮ (ಶೇ)	82	71	55	55	42
ಗಾಳಿಯ ವೇಗ (ಕಿ.ಮಿ/ಗಂಟೆಗೆ)	10	10	6	7	8
ಗಾಳಿಯ ದಿಕ್ಕು (ಡಿಗ್ರಿ)	90	100	30	30	330

ಮುಂಬರುವ 5 ದಿನಗಳಲ್ಲಿ ಹಗುರ ಮಳೆ ಆಗುವ ಸಾಧ್ಯತೆಯಿದೆ. ದಿನದ ಗರಿಷ್ಠ ಉಷ್ಣಾಂಶ **27.0–28.0**^{o} ಸೆ ಮತ್ತು ಕನಿಷ್ಠ **15.0-18.0**^{o} ಸೆ ಇರುವ ಸಾಧ್ಯತೆ ಇದೆ. ಬೆಳಿಗಿನ ಆರ್ದ್ರತೆ ಪ್ರಮಾಣ ಶೇ **70-97 % %** ಇದ್ದು ಮಧ್ಯಾಹ್ನ **42–82 %** ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ **6-10** ಕಿ.ಮೀ. ವೇಗದಲ್ಲಿ ಬೀಸುವ ಸ0ಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

ಬೆಳೆಗಳು	ಹವಾಮಾನ ಆಧಾರಿತ ಕೃಷಿ ಸಲಹೆಗಳು
ತೊಗರಿ	➢ ಕಟಾವು ಮಾಡುವುದನ್ನು 2-3 ದಿನಗಳ ಕಾಲ ಮುಂದೂಡಿ.
ರಾಗಿ	➢ ಕಟಾವು ಮಾಡುವುದನ್ನು 2-3 ದಿನಗಳ ಕಾಲ ಮುಂದೂಡಿ. ಮತ್ತು ಕಟಾವಾದ ಬೆಳೆಗಳನ್ನು ಒಗ್ಗೂಡಿಸಿ ಮೆದೆಹಾಕುವುದು ಸೂಕ್ತ.
ಮೆಕ್ಕೆಜೋಳ	➢ ಕಟಾವು ಮಾಡುವುದನ್ನು 2-3 ದಿನಗಳ ಕಾಲ ಮುಂದೂಡಿ.
ತೋಟಗಾರಿಕೆ	
ಮಾವು	➢ ಸಸ್ಯ ಸಂರಕ್ಷಣಾ ಸಿಂಪರಣೆಯನ್ನು ಮೂರ್ನಾಲ್ಕು ದಿನಗಳ ಕಾಲ ಮುಂದೂಡುವುದು ಸೂಕ್ತ. ➢ ಇನ್ನು ಮುಂದೆ ಮೂಡುವ ಹೂ ಗೊಂಚಲುಗಳಿಗೆ ಸೂಕ್ತ ಸಸ್ಯ ಸಂರಕ್ಷಣಾ ಕ್ರಮಗಳನ್ನು ಅನುಸರಿಸಿ ಕಾಪಾಡಬೇಕು. ➢ ಮರಗಳ ಬುಡದ ಪಾತಿಗಳನ್ನು ಸ್ವಚ್ಛಗೊಳಿಸಿ ಲಾಂಟಾನ ಮುಂತಾದ ಕಳೆ ಸಸ್ಯಗಳಿದ್ದರೆ ಬೇರು ಸಮೇತಕಿತ್ತುತೆಗೆಯಬೇಕು. ➢ ಅದರ ಜೊತೆಗೆ ಮರಗಳಲ್ಲಿ ಕಣ್ಣಾಡಿಸಿ ಪರಾವಲಂಬಿ ಸಸ್ಯಗಳಾದ ಬದನಿಕೆ (ಕಸ್ಕ್ಯೂಟ, ಲೊರಾಂಥಸ್) ಮುಂತಾದುವುಗಳನ್ನು ಸವರಿತೆಗೆಯಬೇಕು.ಅಧಿಕ ಸಾಂದ್ರತೆ ನೆಡುವೆಕೆಯಲ್ಲಿಕಾಂಡ ಪರಾವಲಂಬಿ ಸಸ್ಯಗಳ ಹಾವಳಿ ಜಾಸ್ತಿಯಿರುತ್ತದೆ.
ದ್ರಾಕ್ಷಿ	➢ ದ್ರಾಕ್ಷಿಬಳ್ಳಿಗಳ ಸವರುವಿಕೆಯನ್ನು ಸ್ವಲ್ಪ ಮುಂದೂಡುವುದುಉತ್ತಮ. ➢ ಮಳೆ ಸುರಿಯುವ ಸಮಯದಲ್ಲಿ ಬಳ್ಳಿ ಹಂಬುಗಳನ್ನು ಸವರಿದ್ದೇಆದರೆ ಪರಾಗ ಮತ್ತು ಶಲಾಕಾಗ್ರದದ್ರವ ತೊಳೆದು ಹೋಗುವುದಲ್ಲದೆರೋಗ ಮತ್ತು ಕೀಟಗಳ ಹಾವಳಿ ಹೆಚ್ಚಾಗಿ ಫಸಲು ಕುಸಿಯುವ ಸಾಧ್ಯತೆಯಿದೆ.ಚಿಗುರು ಜಾಸ್ತಿಯಾದರೂ ಫಲ ಕಚ್ಚುವ ಚಿಗುರುಕಡಿಮೆಯಾಗುತ್ತದೆ. ➢ ದ್ರಾಕ್ಷಿಯಲ್ಲಿಬೂದಿ ರೋಗದ ಹಾವಳಿ ಉಂಟಾಗುವ ಸಾಧ್ಯತೆಇರುವುದರಿಂದಅದರ ಹತೋಟಿಗೆ ನೀರಿನಲ್ಲಿಕರಗುವಗಂಧಕವನ್ನು ಸಿಂಪಡಿಸುವುದು ಸೂಕ್ತ.
ಜಾನುವಾರು	
ಹೈನುಗಾರಿಕೆ	➢ ಜಾನುವಾರು, ರೇಷ್ಮೆ ಹಾಗೂ ಕೋಳಿ ಸಾಕಣೆ ಕೊಠಡಿಯ ಉಷ್ಣಾಂಶದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದು. ➢ ಕೊಟ್ಟಿಗೆಯನ್ನು ಶುಚಿಯಾಗಿ ಇಟ್ಟುಕೊಳ್ಳುವುದು ಮತ್ತು ಜಾನುವಾರುಗಳನ್ನು ಚಳಿಗಾಳಿಯಿಂದ ರಕ್ಷಿಸಬೇಕು.

ನೋಡಲ್ ಅಧಿಕಾರಿ:
ಕೃ.ವಿ.ವಿ, ಜಿ.ಕೆ.ವಿ.ಕೆ
ಬೆಂಗಳೂರು